## ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ5(1)/ ಪ್ರ.ದ.ಸ/ಜೇ.ಪ/01/2021-22　　　　　　　　　　ದಿನಾಂಕ: 17.03.2022

**ಜ್ಞಾಪನ**

ವಿಷಯ: ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಪ್ರಥಮ ದರ್ಜೆ ಸಹಾಯಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ ಕುರಿತಂತೆ ಜಿಲ್ಲಾ ಹಂತದಲ್ಲಿ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ತಂಡವನ್ನು ರಚಿಸುವ ಕುರಿತು.

ಉಲ್ಲೇಖ: ಮಾನ್ಯ ಆಯುಕ್ತರ ಆದೇಶಾನುಸಾರ.

*******

ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಪ್ರಥಮ ದರ್ಜೆ ಸಹಾಯಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01.01.2022ರಲ್ಲಿದ್ದಂತೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ದಿನಾಂಕ: 10.12.2021ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 106 ಸೇನೆನಿ 2021ರಲ್ಲಿದ್ದಂತೆ "ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತ ಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸಬೇಕಾಗಿದ್ದು, ವಿವರವಾದ ನಿಯಮಗಳನ್ನು ಸದರಿ ಆದೇಶದಲ್ಲಿ ನೀಡಲಾಗಿದೆ. ನೇರ ನೇಮಕಾತಿ ಮತ್ತು ಮುಂಬಡ್ತಿ ಎರಡೂ ವಿಧಾನಗಳಿಂದಲೂ ನೇಮಕ ಮಾಡುವ ವೃಂದಗಳಿಗೆ ನೇಮಕಾತಿ ನಿಯಮಗಳನುಸಾರ ನೇರ ನೇಮಕಾತಿ ಮತ್ತು ಮುಂಬಡ್ತಿಗೆ ನಿಗದಿಪಡಿಸಲಾದ ಅನುಪಾತ / ಪ್ರತಿಶತ ಕಾಯ್ದುಕೊಳ್ಳಬೇಕಾಗಿದ್ದು, ಈ ಬಗ್ಗೆ ವಾಸ್ತವವಾಗಿ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆಯನ್ನು ನಿಖರವಾಗಿ ಹೊಂದಬೇಕಾಗಿದ್ದು, ಕಾರ್ಯನಿರತ ಸಿಬ್ಬಂದಿ ಬಗ್ಗೆಯೂ ಕೂಡ ನಿಖರ ಅಂಕಿ-ಅಂಶದ ಆಧಾರದ ಮೇಲೆ ವರ್ಗೀಕರಣವನ್ನು ಅನುಸರಿಸಬೇಕಾಗುತ್ತದೆ. ಈ ಕುರಿತಂತೆ (1) ಪ್ರಥಮ ದರ್ಜೆ ಸಹಾಯಕರ ವೃಂದದ ಮಂಜೂರಾದ ಹುದ್ದೆಗಳು (2) ಸದರಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು (3) ಖಾಲಿ ಹುದ್ದೆಗಳ ದೃಢೀಕೃತ ಮಾಹಿತಿಯನ್ನು ಜಿಲ್ಲೆಗಳಿಂದ ಪಡೆಯುವ ಬಗ್ಗೆ ಈ ಕೆಳಗಿನಂತೆ ಜಿಲ್ಲಾ ಹಂತದಲ್ಲಿ ತಂಡವನ್ನು ರಚಿಸಲಾಗಿದೆ.

1. ಆಯಾ ಜಿಲ್ಲಾ ಉಪನಿರ್ದೇಶಕರು – ಅಧ್ಯಕ್ಷರು.
2. ಪತ್ರಾಂಕಿತ ಸಹಾಯಕರು.
3. ಸಂಬಂಧಿಸಿದ ಅಧೀಕ್ಷಕರು.
4. ವಿಷಯ ನಿರ್ವಾಹಕರು.

Scanned with CamScanner

ಸದರಿ ತಂಡವು ವ್ಯಾಪ್ತಿಯ ಎಲ್ಲಾ ಕಛೇರಿಗಳಲ್ಲಿ / ಶಾಲೆಗಳಲ್ಲಿ (ಕೇಂದ್ರ ಕಛೇರಿಗಳು/ ವಿಭಾಗೀಯ ಸಹ ನಿರ್ದೇಶಕರ ಕಛೇರಿಗಳು / ಡಯಟ್ / ಇತರೆ) ಮಂಜೂರಾಗಿರುವ ಹುದ್ದೆಗಳನ್ನು ಮತ್ತು ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಾಹಿತಿಯನ್ನು ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಮಂಜೂರಾತಿ ಆದೇಶಗಳನ್ನು ಪರಿಶೀಲಿಸಿಕೊಂಡು, ಕಾರ್ಯ ನಿರತ ಸಿಬ್ಬಂದಿಗಳ ಸೇವಾವಹಿಯನ್ನು ಪರಿಶೀಲಿಸಿಕೊಂಡು ನಿಖರ ದೃಢೀಕೃತ ಮಾಹಿತಿಯನ್ನು ಜೇಷ್ಠತಾ ಪಟ್ಟಿಯಲ್ಲಿನ ಕಾಲಂಗಳ ವಿವರ ರೀತ್ಯ ನಮೂನೆಯಲ್ಲಿ ದೃಢೀಕರಿಸಿ ಎಲ್ಲಾ ಪೂರಕ ಆದೇಶಗಳೊಂದಿಗೆ ದಿನಾಂಕ: 31.03.2022ರೊಳಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ಇ-ಮೇಲ್ ಮುಖಾಂತರವೂ ದೃಢೀಕೃತ ಪ್ರತಿಯನ್ನು obcpi2016@gmail.com ಗೆ ಕಳುಹಿಸಲು ತಿಳಿಸಿದೆ.

**"ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

**ಡಾ. ರೂಪಶ್ರೀ.ಎಸ್, ಕ.ಆ.ಸೇ**
**ಜಂಟಿ ನಿರ್ದೇಶಕರು (ಆಡಳಿತ)**

ರವರಿಗೆ:-

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ).
2. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಪತ್ರಾಂಕಿತ ಸಹಾಯಕರಿಗೆ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ರವರ ಮುಖಾಂತರ.
3. ತಂಡದ ಇತರೆ ಸದಸ್ಯರುಗಳಿಗೆ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ರವರ ಮುಖಾಂತರ.

ಪ್ರತಿಯನ್ನು:-

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ.
2. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ.
3. ಕಛೇರಿ ಪ್ರತಿ.

Scanned with CamScanner